ಸೆಲೆಬ್ರಿಟಿ

■ ಹನಿ

# ಸತ್ಯ ಮತ್ತು ಕರ್ಮ

'ಐಟಿ ವಲಯದಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳು ಸಂಬಳ ಹೆಚ್ಚು ಮಾಡಿ ಎಂದು ಕೇಳಬಾರದು. ಸಂಬಳ ಹೆಚ್ಚಳದ ಬೇಡಿಕೆ ಇಡುವ ಬದಲು ಅವರು ತಮ್ಮ ಕರ್ಮವನ್ನು ನಂಬಬೇಕು. ಸಂಬಳ ಹೆಚ್ಚಾಗದಿದ್ದರೂ ಅವರ ಶ್ರಮಪೂರ್ಣ ದುಡಿಮೆಯನ್ನು ಕಾಲಕ್ರಮೇಣ ಜನರು ಮೆಚ್ಚಿಕೊಳ್ಳುತ್ತಾರೆ. ಆಗ ವ್ಯವಸ್ಥೆಯೇ ಅವರ ಶ್ರಮಕ್ಕೆ ತಕ್ಕ ಸಂಬಳವನ್ನು ನೀಡುತ್ತದೆ..'

–ಇದು ಹೊಸ ಕರ್ಮ ಸಿದ್ಧಾಂತ. ಇದನ್ನು ಇತ್ತೀಚೆಗೆ ಬೋಧಿಸಿದವರು ಮೈಕ್ರೊಸಾಫ್ಟ್ ಎಂಬ ದೈತ್ಯ ಐಟಿ ಕಂಪೆನಿಯ 'ಸಿಇಒ' ಸತ್ಯ ನಾಡೆಲ್ಲ. ಜಗತ್ತಿನ ಅತ್ಯಂತ ಪ್ರತಿಷ್ಠಿತ ಕಂಪೆನಿಯ ಅತ್ಯಂತ ಪ್ರಭಾವಶಾಲಿ ಹುದ್ದೆಯಲ್ಲಿದ್ದು ಅಮೆರಿಕದಲ್ಲಿ ವಾಸಿಸುತ್ತಿರುವ ಸತ್ಯ ನಾಡೆಲ್ಲ, ಹೈದರಾಬಾದ್‌ನಲ್ಲಿ ಹುಟ್ಟಿ ಮಣಿಪಾಲದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಪಡೆದಿರುವುದರಿಂದ, ಇದು ನಮ್ಮದೇ ಸ್ವದೇಶೀ ಕರ್ಮ ಸಿದ್ಧಾಂತ ಎಂದು ನಾವೆಲ್ಲ ಹೆಮ್ಮೆ ಪಡಬಹುದು. ಏಕೆಂದರೆ ನಮ್ಮಲ್ಲಿ ಈಗಲೂ ದಿನಗೂಲಿ ಗಂಡಾಳಿಗಿಂತ ಹೆಣ್ಣಾಳಿಗೆ ಅರ್ಧಕ್ಕರ್ಧ ಕಡಿಮೆಯೇ ಇದೆ! 'ಸಮಾನತೆಯ ಯುಗದ ಷೋಮ್ಯಾನ್'ನಂತೆ ಕಂಗೊಳಿಸುವ ಐಟಿ ಕ್ಷೇತ್ರದಲ್ಲೂ ಹೆಣ್ಣಿನ ವಿರುದ್ಧ ಈ ಕೂಲಿ ತಾರತಮ್ಯ ನಡೆಯುತ್ತಿದೆ ಎನ್ನುವುದು ವಿಪರ್ಯಾಸದ ಸಂಗತಿ.

ಸತ್ಯ ನಾಡೆಲ್ಲ ಹೇಳಿದ ಪ್ರಕಾರ, ಮಹಿಳೆಯರು ತುಟಿ ಬಿಚ್ಚದೆ ಕೆಲಸ ಮಾಡುತ್ತಾ ಹೋದರೆ ವ್ಯವಸ್ಥೆಯೇ ಸಂಬಳ ಹೆಚ್ಚು ಮಾಡಲು ಎಷ್ಟು ಸಮಯ ಹಿಡಿಯಬಹುದು? ಜಗತ್ತಿನ ಯಾವ ದೊಡ್ಡ ಕಂಪೆನಿಯಲ್ಲೂ, ಗಂಡು ಸಿಇಒಗೆ ಸಿಗುವ ಸಂಬಳದ ಶೇಕಡಾ 25ರಷ್ಟು ಸಂಬಳ ಮಾತ್ರ ಹೆಣ್ಣು ಸಿಇಒಗೆ ಸಿಗುತ್ತದೆ ಎನ್ನುವುದು ಇತ್ತೀಚಿನ ಸಮೀಕ್ಷೆಯೊಂದರ ತಿರುಳು. ಮೈಕ್ರೊಸಾಫ್ಟ್ ಕಂಪೆನಿಯನ್ನೇ ತೆಗೆದುಕೊಂಡರೆ, ಈಗ ಸತ್ಯ ನಾಡೆಲ್ಲ ಅವರಿಗೆ ಸಿಗುತ್ತಿರುವ ಒಟ್ಟು ವಾರ್ಷಿಕ ಸಂಬಳ (ಬೋನಸ್, ಷೇರು ಪಾಲು ಸೇರಿ) 112 ಕೋಟಿ ರೂಪಾಯಿ. (ಇತರ ಭತ್ಯೆ ಬೇರೆಯೇ ಇದೆ.) ಒಂದು ವೇಳೆ ಹೆಣ್ಣೊಬ್ಬಳು ಆ ಸಿಇಒ ಸ್ಥಾನ ಪಡೆದಿದ್ದರೆ ಆಕೆಗೆ ಇದರ ಕಾಲು ಭಾಗ, ಅಂದರೆ 28 ಕೋಟಿ ರೂಪಾಯಿ ಮಾತ್ರ ಸಂಬಳ ಕೊಡುತ್ತಿದ್ದರು! ಅಂದರೆ ಆಕೆಗೆ ಗಂಡು ಸಿಇಒ ನಷ್ಟೇ ಸಂಬಳ ಕ್ರಮೇಣ ಹೆಚ್ಚಬೇಕಿದ್ದರೆ ಆಕೆ 100 ವರ್ಷದ ಮುದುಕಿ ಆದ ಬಳಿಕವೂ ಕೆಲಸ ಮಾಡಬೇಕು!

ಸತ್ಯ ಅವರು ತಮ್ಮ ಈ ಸುಪ್ರಸಿದ್ಧ ಸಿದ್ಧಾಂತವನ್ನು ಮಂಡಿಸಿದ್ದು ಅರಿಜೋನಾದ ಫೀನಿಕ್ಸ್‌ನಲ್ಲಿ ಮಹಿಳಾ ಟೆಕ್ಕಿಗಳ ಸಭೆಯಲ್ಲಿ. ಜಗತ್ತಿನ ವಿವಿಧೆಡೆಗಳಿಂದ ಬಂದ 7500 ಸಾವಿರ ಮಹಿಳೆಯರು ಅಲ್ಲಿ ಸೇರಿದ್ದರು. ವೇದಿಕೆಯ ಮೇಲೆ ಹಾರ್ವೆ ಮಡ್ ಕಾಲೇಜಿನ ಅಧ್ಯಕ್ಷೆ ಮಾರಿಯಾ ಕ್ಲೇವ್, ಸತ್ಯ ನಾಡೆಲ್ಲರನ್ನು ಸಂದರ್ಶನ ಮಾಡುತ್ತಿದ್ದರು. ಈಕೆ ಮೈಕ್ರೊಸಾಫ್ಟ್ ಕಂಪೆನಿಯ ನಿರ್ದೇಶಕಿಯೂ ಹೌದು. ಸತ್ಯರ ಉತ್ತರ ಕೇಳಿ ಆಕೆ ತನ್ನ ಭಿನ್ನಾಭಿಪ್ರಾಯವನ್ನು ವೇದಿಕೆಯಲ್ಲೇ ವ್ಯಕ್ತಪಡಿಸಿದರು. 'ಮಹಿಳೆಯರೇ ನೀವೆಲ್ಲ ಕೆಲಸಕ್ಕೆ ಸೇರುವ ಮುನ್ನ ಸೂಕ್ತ ಸಂಬಳ ಫಿಕ್ಸ್ ಮಾಡಲು ಸಾಕಷ್ಟು ಹೋಮ್‌ವರ್ಕ್ ಮಾಡಬೇಕಾಗುತ್ತದೆ' ಎಂದು ಆಕೆ ಎಚ್ಚರಿಸಿದಾಗ, ಇಡೀ ಸಭೆಯಲ್ಲಿ ಕರತಾಡನ!

ಮೈಕ್ರೊಸಾಫ್ಟ್‌ನಲ್ಲಿ 1,28,076 ಉದ್ಯೋಗಿಗಳಿದ್ದಾರೆ. ಇವರಲ್ಲಿ ಅರ್ಧದಷ್ಟು ಜನ ಅಮೆರಿಕದಲ್ಲಿದ್ದಾರೆ. ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇಕಡಾ 20 ಮಾತ್ರ. ಕಂಪೆನಿಯಲ್ಲಿ ಒಟ್ಟು 12 ನಿರ್ದೇಶಕರಿದ್ದಾರೆ. ಅವರಲ್ಲಿ ಇಬ್ಬರು ಮಾತ್ರ ಮಹಿಳೆಯರು. ಇಂತಹ ತಾರತಮ್ಯದ ಕಂಪೆನಿಯಲ್ಲಿ ಪುರುಷರಿಗೆ ಸಮಾನ ಸಾಮರ್ಥ್ಯದಿಂದ ಕೆಲಸ ಮಾಡುವ ಮಹಿಳೆಗೆ ಸಮಾನ ಸಂಬಳ ಸಿಗಲು ಸಾಧ್ಯವೆ? ಮೈಕ್ರೊಸಾಫ್ಟ್ ಮಾತ್ರವಲ್ಲ, ಎಲ್ಲ ಐಟಿ ಕಂಪೆನಿಗಳದ್ದೂ ಅದೇ ಕಥೆ. ಫೇಸ್‌ಬುಕ್ ಕಂಪೆನಿಯಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇಕಡಾ 31. ಗೂಗಲ್‌ನಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇಕಡಾ 30. ಅಮೆರಿಕದ ಎಲ್ಲ ಕಂಪೆನಿಗಳಲ್ಲೂ ಮಹಿಳೆಯರು ಮತ್ತು ಪುರುಷರ ಸಂಬಳದ ಮಧ್ಯೆ ಶೇಕಡಾ 23ರಷ್ಟು ವ್ಯತ್ಯಾಸವಿದೆ!

46ರ ಹರೆಯದ, ಇಬ್ಬರು ಹೆಣ್ಣುಮಕ್ಕಳ ತಂದೆಯಾಗಿರುವ ಸತ್ಯ ಹೊಸ ತಲೆಮಾರಿಗೆ ಸೇರಿದವರು. ಅವರು ಮೈಕ್ರೊಸಾಫ್ಟ್ ಸೇರಿದ್ದು 92ರಲ್ಲಿ. ಕಳೆದ 23 ವರ್ಷಗಳಿಂದ ವಿವಿಧ ಹುದ್ದೆಗಳ ಮೂಲಕ ಹಾದು ಸಿಇಒ ಆಗಿರುವ ಅವರಿಗೆ ತಮ್ಮ ಕಂಪೆನಿಯ ಮಹಿಳೆಯರ ಬುದ್ಧಿಮತ್ತೆಯ ಬಗ್ಗೆ ಸಂಶಯ ಏಕೆ ಬಂತೋ ಗೊತ್ತಾಗುತ್ತಿಲ್ಲ. ಅವರ ಹೇಳಿಕೆ ಪ್ರಕಟವಾದ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಹಿಗ್ಗಾಮುಗ್ಗಾ ಟೀಕೆಗಳು ಶುರುವಾದಾಗ, 'ಇಲ್ಲ, ನಾನು ಹೇಳಿದ್ದು ಸಂಪೂರ್ಣ ತಪ್ಪು' ಎಂಬ ಸ್ಪಷ್ಟೀಕರಣವನ್ನು ನೀಡಿದ್ದಾರೆ. ಅಷ್ಟರ ಮಟ್ಟಿಗೆ ವಿವಾದ ತಣ್ಣಗಾಗಿದೆ. ಆದರೆ ಪುರುಷಕೇಂದ್ರಿತ ಐಟಿ ವ್ಯವಸ್ಥೆಯಲ್ಲಿ ಮಹಿಳೆಯರ ಕುರಿತು ಇರುವ ತಾರತಮ್ಯವಂತೂ ಜಗಜ್ಜಾಹೀರಾಗಿದೆ. ಈ ತಾರತಮ್ಯದ ಬಗ್ಗೆ ಜಾಗತಿಕ ಚರ್ಚೆ ಹುಟ್ಟುಹಾಕಿದ ಸತ್ಯ ಅವರನ್ನು ಅಭಿನಂದಿಸಲೇಬೇಕು! ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65